ಕೆರೆಗಳ ಸಮಗ್ರ ಅಭಿವೃದ್ಧಿ

308 (726) ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ): ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರಸಕ್ತ ಸಾಲಿನಲ್ಲಿ ಕೇಂದ್ರ ಸರ್ಕಾರದ ತ್ವರಿತ ನೀರಾವರಿ ಯೋಜನೆಯಡಿಯಲ್ಲಿ ರಾಜ್ಯದಲ್ಲಿ ಯಾವ ಅಣೆಕಟ್ಟು ಮತ್ತು ನಾಲೆಗಳನ್ನು ಅಧುನೀಕರಣಗೊಳಿಸುವ ಯೋಜನೆ ಸರ್ಕಾರದ ಮುಂದಿದೆ;

ಆ) ಇದಕ್ಕಾಗಿ ಅಂದಾಜು ವೆಚ್ಚ ಯೋಜನೆಯನ್ನು ತಯಾರಿಸಲಾಗಿದೆಯೇ; ಹಾಗಿದ್ದಲ್ಲಿ, ಈ ಪ್ರತಿ ಯೋಜನೆಗೆ ತಗಲುವ ಅಂದಾಜು ವೆಚ್ಚವೆಷ್ಟು;

ಇ) ಪ್ರಸಕ್ತ ಸಾಲಿನಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ವಿಶೇಷವಾಗಿ ಬೀದರ್ ಜಿಲ್ಲೆಯಲ್ಲಿ ಮೇಲ್ಕಂಡ ಯೋಜನೆಯಡಿಯಲ್ಲಿ ಯಾವ ಯಾವ ಸ್ಥಳಗಳಲ್ಲಿ ಅಣೆಕಟ್ಟು ಮತ್ತು ನಾಲೆಗಳ ಆಧುನೀಕರಣ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗುವುದು?

ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು):

ಅ) ರಾಜ್ಯದ ಭದ್ರಾ ಯೋಜನಾ ನಾಲೆಗಳ ಆಧುನೀಕರಣವನ್ನು ಎ.ಐ.ಬಿ.ಪಿ. ಅಡಿಯಲ್ಲಿ ಕೈಗೆತ್ತಿಕೊಳ್ಳಲಾಗಿದೆ. ಚಿತ್ರದುರ್ಗ ಜಿಲ್ಲೆಯ ಭೀಮಸಮುದ್ರ ಕೆರೆ ನಾಲೆಗಳ ಆಧುನೀಕರಣವನ್ನು ಎ.ಐ.ಬಿ.ಪಿ. ಅಡಿಯಲ್ಲಿ ಕೈಗೊಳ್ಳಲು ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿದೆ. ಗುಲ್ಬರ್ಗ ಜಿಲ್ಲೆಯ ಮಧ್ಯಮ ನೀರಾವರಿ ಯೋಜನೆಗಳಾದ:

1. ಹತ್ತಿಕುಣಿ
2. ಮುಲ್ಲಾಮಾರಿ ಮೇಲ್ದಂಡೆ ಹಾಗೂ
3. ಚಂದ್ರಂಪಳ್ಳಿ ಯೋಜನೆಗಳ ಆಧುನೀಕರಣ ಪ್ರಸ್ತಾವನೆಗಳನ್ನು ಕೇಂದ್ರ ಸರ್ಕಾರ ತ್ವರಿತ ನೀರಾವರಿ ಯೋಜನೆಯ ಇ.ಆರ್.ಎಂ. ಕಾರ್ಯಕ್ರಮದಡಿ ನೆರವು ನಿರೀಕ್ಷಿಸಲಾಗಿದೆ..

ಆ) ಆಧುನೀಕರಣ ಅಂದಾಜು ತಯಾರಿಸಲಾಗಿದೆ. ಯೋಜನಾವಾರು ಅಂದಾಜು ಪಟ್ಟಿಯ ವಿವರ ಈ ಕೆಳಗಿನಂತಿದೆ:

ಭದ್ರಾ ಯೋಜನೆ	ರೂ. 951.00 ಕೋಟಿಗಳು
ಹತ್ತಿಕುಣಿ	ರೂ. 6.75 ಕೋಟಿಗಳು

ಮುಲ್ಲಾಮಾರಿ ಮೇಲ್ದಂಡೆ	ರೂ. 8.21 ಕೋಟಿಗಳು
ಚಂದ್ರಂಪಳ್ಳಿ	ರೂ. 14.93 ಕೋಟಿಗಳು
ಭೀಮಸಮುದ್ರ ಕೆರೆ ನಾಲೆಗಳ ಹಾಗೂ ಪೂರಕ ನಾಲೆಗಳು	ರೂ. 9.375 ಕೋಟಿಗಳು

ಇ) ಬೀದರ್ ಜಿಲ್ಲೆಯ ಕಾರಂಜಾ ಯೋಜನೆಯ ಬಾಕಿ ಕಾಮಗಾರಿಗಳು ಹಾಗೂ ಮುಲ್ಲಾಮಾರಿ ಮೇಲ್ದಂಡೆ ಯೋಜನೆಯ ಅಣೆಕಟ್ಟು ಮತ್ತು ನಾಲೆಗಳ ಆಧುನೀಕರಣ ಕಾಮಗಾರಿಗಳನ್ನು ಕೇಂದ್ರ ಸರ್ಕಾರದ ಎ.ಐ.ಬಿ.ಪಿ. ಅಡಿಯಲ್ಲಿ ಕೈಗೆತ್ತಿಕೊಳ್ಳಲಾಗುವುದು.

ಕೆರೆಗಳ ಸಮಗ್ರ ಅಭಿವೃದ್ಧಿ

309 (727) ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ): ಮಾನ್ಯ ಸಣ್ಣ ನೀರಾವರಿ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹದಿಮೂರನೇ ಆರ್ಥಿಕ ಆಯೋಗದ ಅನುದಾನದಡಿಯಲ್ಲಿ ರಾಜ್ಯದಲ್ಲಿ ಜಲಕಾಯಗಳ/ಕೆರೆಗಳ ಸಮಗ್ರ ಅಭಿವೃದ್ಧಿಗಾಗಿ ಗ್ರ್ಯಾಂಟ್ ಇನ್ ಏಡ್ ಅಡಿ ಎಷ್ಟು ಕೋಟಿ ಅನುದಾನವನ್ನು ನೀಡಲಾಗುತ್ತಿದೆ; ಈ ಯೋಜನೆಯ ಅನುಷ್ಠಾನಕ್ಕಾಗಿ ಅಂದಾಜು ವೆಚ್ಚ ಯೋಜನೆಯನ್ನು ತಯಾರಿಸಲಾಗಿದೆಯೇ; (ಜಿಲ್ಲಾವಾರು ವಿವರಗಳನ್ನು ಒದಗಿಸುವುದು)

ಆ) ಈ ಯೋಜನೆಯಡಿಯಲ್ಲಿ ರಾಜ್ಯದ ಯಾವ ಯಾವ ಪ್ರದೇಶಗಳಲ್ಲಿ ಈ ಅಭಿವೃದ್ಧಿ ಕಾರ್ಯಗಳನ್ನು ತೆಗೆದುಕೊಳ್ಳಲಾಗುತ್ತಿದೆ;

ಇ) ಈ ಯೋಜನೆಯಡಿಯಲ್ಲಿ ಅತ್ಯಂತ ಹಿಂದುಳಿದ ಬೀದರ್ ಜಿಲ್ಲೆಯ ಯಾವ ಯಾವ ವಿಧಾನಸಭಾ ಕ್ಷೇತ್ರಗಳಲ್ಲಿ ಜಲಕಾಯಗಳನ್ನು ಮತ್ತು ಸಣ್ಣ ನೀರಾವರಿ ಕೆರೆಗಳನ್ನು ಅಭಿವೃದ್ಧಿಪಡಿಸಲಾಗುವುದು; ಈ ಯೋಜನೆಗಾಗಿ ತಗಲುವ ಅಂದಾಜು ವೆಚ್ಚ ಎಷ್ಟು;

ಈ) ಈ ಯೋಜನೆಯನ್ನು ಎಷ್ಟು ಅವಧಿಯೊಳಗೆ ಅನುಷ್ಠಾನಗೊಳಿಸಲಾಗುವುದು ?